# ಭೂಮಿ ಡೇಟಿಂಗ್

ಇನ್ನೆಂದೂ ಸಿನಿಮಾ ರಂಗದ ನಟ ತಂತ್ರಜ್ಞರ ಜೊತೆಗೆ ಡೇಟಿಂಗ್ ಮಾಡಲ್ಲ ಎಂದು ಭೂಮಿ ಪೆಡ್ನೇಕರ್ ಪ್ರತಿಜ್ಞೆ ಮಾಡಿದ್ದಾರಂತೆ! ಇತ್ತೀಚಿನ ಸಂದರ್ಶನವೊಂದರಲ್ಲಿ ಸ್ವತಃ ಭೂಮಿ ಇದನ್ನು ಸ್ಪಷ್ಟಪಡಿಸಿದ್ದಾರೆ. 'ಸಿನಿಮಾದಲ್ಲಿ ಇರೋರಿಗೆ ಪುರುಸೊತ್ತೇ ಇರುವುದಿಲ್ಲ' ಎನ್ನುವುದು ಇದಕ್ಕೆ ಆಕೆ ನೀಡಿರುವ ಕಾರಣ!

ಭೂಮಿ ಮತ್ತು 'ಪತಿ ಪತ್ನಿ ಔರ್ ವೊ' ಚಿತ್ರದ ನಿರ್ಮಾಪಕ ಜುನೊ ಛೋಪ್ರಾ ಮಧ್ಯೆ ನಿಕಟ ಸಂಬಂಧ ಇದ್ದುದು ಬಾಲಿವುಡ್‌ನಲ್ಲಿ ಎಲ್ಲರಿಗೆ ಗೊತ್ತಿದ್ದ ಸುದ್ದಿ. ಈ ಸಂಬಂಧ ಇತ್ತೀಚೆಗೆ ಮುರಿದುಬಿದ್ದಿದೆಯಂತೆ. ಹಾಗೆಂದು ಸುದ್ದಿ ಹಬ್ಬಿದಾಗ ಭೂಮಿ ಯಾವುದೇ ಪ್ರತಿಕ್ರಿಯೆ ನೀಡದೇ ಸುಮ್ಮನಿದ್ದರು. ಈಗ ಈ ಸಂದರ್ಶನ ಜಾಲತಾಣದಲ್ಲಿ ಸುದ್ದಿ ಮಾಡುತ್ತಿದೆ.

ಈ ಮಧ್ಯೆ ಭೂಮಿಯ ಸ್ನೇಹಿತ ಸುಶಾಂತ್ ಸಿಂಗ್ ರಜಪೂತ್ ಆಕೆಗೆ ಟೆಲಿಸ್ಕೋಪ್ ಖರೀದಿಸಲು ಸಲಹೆ ನೀಡಿದ್ದಾನೆ. ಸುಶಾಂತ್‌ಗೆ ಆಕಾಶಕಾಯ ವೀಕ್ಷಣೆಯ ಹುಚ್ಚು. ಅದಕ್ಕಾಗಿ ಆತ ಸದಾ ಟೆಲಿಸ್ಕೋಪ್ ಜೊತೆಗೇ ಓಡಾಡುತ್ತಾನೆ. ಇತ್ತೀಚೆಗೆ ಆತ ತೆಗೆದಿರುವ ಬುಧ, ಮಂಗಳ ಮತ್ತು ಶನಿ ಗ್ರಹಗಳ ಫೋಟೊವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ್ದ. ಅದನ್ನು ನೋಡಿ ಭೂಮಿ 'ವೋವ್' ಎನ್ನುವ ಪ್ರತಿಕ್ರಿಯೆ ಕಳಿಸಿದ್ದಳಂತೆ. ಅದರ ಹಿನ್ನೆಲೆಯಲ್ಲೇ ಸುಶಾಂತ್‌ನ ಉಚಿತ ಸಲಹೆ ಬಂದಿದೆ. ಬಾಲಿವುಡ್‌ನ ತಾರೆಯರ ಜೊತೆ ರಿಲೇಷನ್‌ಷಿಪ್ ಬೇಡ ಎಂದಾದಲ್ಲಿ ಆಕಾಶದ ತಾರೆಗಳ ಜೊತೆ ಸಂಬಂಧ ಬೆಳೆಸುವುದು ಒಳ್ಳೆಯದೇ!

■ ಬಿಂದು





# ಪಾತ್ರೆ ತಿಕ್ಕಿ ಸಾಕಾಯ್ತು!

ಬಾಲಿವುಡ್ ನಟ ನಟಿಯರು ಕೋವಿಡ್ ಕಾಲದಲ್ಲಿ ಮನೆಯಲ್ಲೇ ಕುಳಿತು ಅಡುಗೆ ಮಾಡುವ, ಪಾತ್ರೆ ತೊಳೆಯುವ, ಕಸ ಗುಡಿಸುವ, ನೆಲ ಒರೆಸುವ ಫೋಟೋಗಳನ್ನು ಅಪ್‌ಲೋಡ್ ಮಾಡಿದ್ದೇ ಮಾಡಿದ್ದು! ಮನೆಕೆಲಸದವರು ಗೈರು ಹಾಜರಾದ ಹಿನ್ನೆಲೆಯಲ್ಲಿ ತಾವೆಲ್ಲ ಸಂತೋಷದಿಂದ ಮನೆಕೆಲಸಗಳನ್ನು ಮಾಡುತ್ತಿದ್ದೇವೆ ಎಂದು ತೋರಿಸಿಕೊಳ್ಳುವುದರಲ್ಲಿ ಮಹಾನಟಿಯರ ಮಧ್ಯೆ ಪೈಪೋಟಿಯೂ ನಡೆಯಿತು. ಕತ್ರೀನಾ, ಕರೀನಾ, ಪ್ರಿಯಾಂಕಾ, ಐಶ್ವರ್ಯ ಎಲ್ಲರೂ ಮುಗಿಬಿದ್ದು ಜಾಲತಾಣಗಳಲ್ಲಿ ಅಡುಗೆ ಮಾಡುವ ಫೋಟೊ ಹಂಚಿಕೊಂಡರು.

ಆದರೆ ಕೊರೊನಾ ಲಾಕ್‌ಡೌನ್ ಅವಧಿ ಮುಂದುವರಿದಂತೆಯೇ ಈ ತಾರೆಯರ ಉತ್ಸಾಹವೂ ಬತ್ತಿಹೋದಂತಿದೆ. ರಿಚಾ ಛಡ್ಡಾ ಅದನ್ನು ಬಹಿರಂಗವಾಗಿಯೇ ಬರೆದುಕೊಂಡಿದ್ದಾಳೆ. ಕಂಗನಾ ಅಭಿನಯದ 'ಪಂಗಾ' ಚಿತ್ರದಲ್ಲಿ ಇತ್ತೀಚೆಗೆ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ರಿಚಾ ಛಡ್ಡಾ, 'ದಿನವೂ ಪಾತ್ರೆ ತೊಳೆದು ಸಾಕಾಗಿದೆ. ಆದಕ್ಕೇ ಈಗ ಪಾಸ್ತಾ ಮಾಡುವುದನ್ನು ಶುರು ಮಾಡಿದ್ದೇನೆ. ಸಣ್ಣ ಬೌಲ್‌ನಲ್ಲಿ ಪಾಸ್ತಾ ಮಾಡುವುದನ್ನು ಕಲಿತಿದ್ದೇನೆ. ಬೌಲ್ ತೊಳೆಯಲೂ ಸುಲಭ' ಎಂದಿದ್ದಾಳೆ. ಆದರ ಫೋಟೊ ಕೂಡಾ ಅಪ್‌ಲೋಡ್ ಮಾಡಿದ್ದು, ಉಳಿದ ತಾರೆಯರೂ ಇಂತಹದ್ದೇ ಸುಲಭದಾರಿ ಕಂಡುಕೊಳ್ಳುವ ಸಾಧ್ಯತೆ ಇದೆ